# ಹತ್ತನೇ ತರಗತಿ ಸಮಾಜ ವಿಜ್ಞಾನದ ಮಾದರಿ ಪ್ರಶ್ನಾ ಪತ್ರಿಕೆ-8

ಅ.ಪ್ರತಿ ಪ್ರಶ್ನೆಯ ಕೆಳಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಕೊಟ್ಟಿರುತ್ತದೆ. ಸೂಕ್ತವಾದುದನ್ನು ಆರಿಸಿ ಬರೆಯಿರಿ.1*10=10

1."ಎ" ಪಟ್ಟಿಯಲ್ಲಿರುವ ಶಾಸನಗಳನ್ನು ಮತ್ತು "ಬಿ" ಪಟ್ಟಿಯಲ್ಲಿ ಇಸವಿಗಳನ್ನು ಕೊಡಲಾಗಿದೆ.ಸರಿಯಾದ ಗುಂಪನ್ನು ಆಯ್ಕೆ ಮಾಡಿ ಬರೆಯಿರಿ.

1. ಪಿಟ್ಸ್ ಇಂಡಿಯಾ ಶಾಸನ ಎ)1773
2. ರೆಗ್ಯುಲೇಟಿಂಗ್ ಶಾಸನ ಬಿ)1909
3. ಮಾಂಟೆಗೂ ಚೇಮ್ಸ್ ಫರ್ಡ್ ಶಾಸನ ಸಿ)1784
4. ಮಿಂಟೋ ಮಾರ್ಲೆ ಸುಧಾರಣೆ ಡಿ)1919

ಉತ್ತರಗಳು:

I. 1-ಎ,2-ಬಿ,3-ಸಿ,4-ಡಿ
II. 1-ಬಿ,2-ಡಿ,3-ಎ,4-ಸಿ
III. 1-ಸಿ,2-ಎ,3-ಡಿ,4-ಬಿ
IV. 1-ಡಿ,2-ಸಿ,3-ಬಿ,4-ಎ

2.ಭಾರತ ಸರ್ಕಾರವು ಸೈನ್ಯವನ್ನು ಕಳುಹಿಸಿ ಪೋಲೀಸ್ ಕಾರ್ಯಾಚರಣೆ ಮಾಡದೆ ಇರುತ್ತಿದ್ದರೆ

A. ಹೈದರಾಬಾದ್ ಸಂಸ್ಥಾನ ಭಾರತದೊಂದಿಗೆ ವಿಲೀನವಾಗುತ್ತಿರಲಿಲ್ಲ.
B. ಜುನಾಘಡ ಸಂಸ್ಥಾನ ಭಾರತ ಒಕ್ಕೂಟ ಸೇರುತ್ತಿರಲಿಲ್ಲ.
C. ಜಮ್ಮು ಕಾಶ್ಮೀರ ಭಾರತದೊಂದಿಗೆ ವಿಲೀನವಾಗುತ್ತಿರಲಿಲ್ಲ.
D. ಮೇಲಿನ ಯಾವುದೂ ಅಲ್ಲ.

3.ಭಾರತ ವಿಭಜನೆಗೆ ಸಂಬಂದಪಟ್ಟಂತೆ ಈ ಕೆಳಗಿನ ನಾಲ್ಕು ಹೇಳಿಕೆಗಳಲ್ಲಿ ತಪ್ಪು ಹೇಳಿಕೆಯನ್ನು ಗುರುತಿಸಿ.

A. ಗಡಿ ಸಮಸ್ಯೆ ಉದ್ಭವಿಸುತ್ತಿರಲಿಲ್ಲ.
B. ಕಾಶ್ಮೀರ ಸಮಸ್ಯೆ ಇರುತ್ತಿರಲಿಲ್ಲ.
C. ಭಾರತ ತನ್ನ ಅಖಂಡತೆಯನ್ನು ಉಳಿಸಿಕೊಂಡಿದೆ.
D. ಕಾರ್ಗಿಲ್ ಯುದ್ಧ ನಡೆಯುತ್ತಿರಲಿಲ್ಲ.

4.ಜಾಗತಿಕ ಸಂಸತ್ತಿನ ರಿತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶ್ವ ಸಂಸ್ಥೆಯ ಅಂಗ ಸಂಸ್ಥೆ________

A. ಸಾಮಾನ್ಯ ಸಭೆ
B. ಭದ್ರುತಾ ಸಮಿತಿ
C. ದತ್ತಿ ಸಮಿತಿ
D. ಅಂತರಾಷ್ಟ್ರೀಯ ನ್ಯಾಯಾಲಯ

5.ಗರ್ಭದಲ್ಲಿರುವ ಭ್ರೂಣದ ಲಿಂಗ ಪತ್ತೆ ಹಚ್ಚುವುದನ್ನು ನಿಯಂತ್ರಿಸುವುದು ಈ ಕಾಯ್ದೆಯಿಂದ ಸಾದ್ಯ_________

A. ಭಾರತ ಅಪರಾಧ ವಿಚಾರಣಾ ಸಂಹಿತೆ
B. ಪ್ರಸವ ಪೂರ್ವ ಲಿಂಗ ಪರೀಕ್ಷೆ ಪ್ರತಿ ಬಂಧಕ ಕಾಯ್ದೆ
C. ಭಾರತದ ದಂಡ ಸಂಹಿತೆ
D. ಬಾಲ ಕಾರ್ಮಿಕ ನಿಷೇಧ ಕಾಯ್ದೆ

6.ಭಾರತದ ಅತ್ಯಂತ ಉದ್ದವಾದ ಅಣೆಕಟ್ಟು ________

A. ದಾಮೋದರ
B. ಭಾಕ್ರಾನಂಗಲ್
C. ಹಿರಾಕುಡ್
D. ತುಂಗಭದ್ರಾ

7.ತೋಟಗಾರಿಕಾ ಬೇಸಾಯದ ಪ್ರಗತಿಯನ್ನು ಹೀಗೆಂದು ಕರೆಯುವರು________

A. ಹಸಿರು ಕ್ರಾಂತಿ
B. ಫ್ಲೋರಿಕಲ್ಚರ್
C. ನೀಲಿಕ್ರಾಂತಿ
D. ಸುವರ್ಣಕ್ರಾಂತಿ

8. ಭಾರತದಲ್ಲಿ ಬ್ರಿಟೀಷ್ ಆಡಳಿತ ಇನ್ನೂ ಮುಂದುವರಿಯುತ್ತಿದ್ದರೆ_________

A. ಭಾರತವು ಅನಭಿವೃದ್ಧಿ ರಾಷ್ಟ್ರವಾಗಿ ಉಳಿಯುತ್ತಿತ್ತು
B. ರಾಷ್ಟ್ರೀಯ ಆದಾಯ ಹೆಚ್ಚುತ್ತಿತ್ತು
C. ಭಾರತೀಯರಿಗೆ ರಾಜಕೀಯ ಸ್ವಾತಂತ್ರ್ಯ ಇರುತ್ತಿತ್ತು
D. ಭಾರತದ ಶಿಕ್ಷಣ ವ್ಯವಸ್ಥೆ ಕುಸಿಯುತ್ತಿತ್ತು.

9.ಭಾರತದಲ್ಲಿ ಹಣವನ್ನು ಚಲಾವಣೆ ಮಾಡಲು ಏಕಸ್ವಾಮ್ಯ ಅಧಿಕಾರ ಪಡೆದ ಬ್ಯಾಂಕ್ ________

A. ರಿಸರ್ವ್ ಬ್ಯಾಂಕ್
B. ಸ್ಟೇಟ್ ಬ್ಯಾಂಕ್
C. ಸಿಂಡಿಕೇಟ್ ಬ್ಯಾಂಕ್
D. ವಿಜಯ ಬ್ಯಾಂಕ್

10.ಭಾರತದಲ್ಲಿ ಇನ್ಫೋಸಿಸ್ ತಂತ್ರಜ್ಞಾನದ ರೂವಾರಿಗಳು__________

A. ಡಾ||ಪ್ರತಾಪ್ ರೆಡ್ಡಿ
B. ನಾರಾಯಣ ಮೂರ್ತಿ
C. ಪಿಕ್ತ್ರಕಪೂರ್
D. ವರ್ಗೀಸ್ ಕುರಿಯನ್

ಆ. ಒಂದು ವಾಕ್ಯದಲ್ಲಿ ಉತ್ತರಿಸಿರಿ.1*14=14

1. ಜನಪದ ಆಕರಗಳು ಇಂದು ಚರಿತ್ರೆಕಾರರಿಗೆ ವರಪ್ರಸಾದವಾಗಿದೆ. ಏಕೆ?
2. ಪಾಕಿಸ್ತಾನವು ಕಾಶ್ಮೀರ ಕಣಿವೆಯ ಮುಸ್ಲಿಂ ಬುಡಕಟ್ಟು ಜನರನ್ನು ದಾಳಿ ಮಾಡುವಂತೆ ಪ್ರಚೋದಿಸಿತು.ಏಕೆ?
3. 1905 ರಲ್ಲಿ ರಷ್ಯಾದಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕ ಪ್ರತಿರೋದ ಉಂಟಾಯಿತು. ಏಕೆ?
4. ಪ್ರಾದೇಶಿಕ ವಾದವನ್ನು ವೈಭವೀಕರಿಸುವುದರಿಂದ ದೇಶದ ಏಕತೆಗೆ ಧಕ್ಕೆಯುಂಟಾಗುತ್ತದೆ. ಹೇಗೆ?
5. ಯುನಿಸೆಫ್ನ ಶುಭಾಶಯ ಪತ್ರಗಳನ್ನು ನಾವು ಖರೀದಿಸಬೇಕು. ಏಕೆ?
6. ಜನರಲ್ಲಿನ ಭಿನ್ನತೆಗೆ ಕಾರಣವೇನು?
7. ಹೆಣ್ಣು ಭ್ರೂಣ ಹತ್ಯೆಗೆ ಕಾರಣವೇನು?
8. ಬೇಸಿಗೆ ಕಾಲದಲ್ಲಿ ಭಾರತದಲ್ಲಿ ಉಷ್ಣಾಂಶ ಅಧಕವಾಗಿರಲು ಕಾರಣವೇನು?
9. ಖರೀಫ್ ಬೇಸಾಯ ಎಂದರೇನು?
10. ಇಂದು ಭಾರತದಿಂದ ಅಭ್ರಕದ ರಫ್ತು ಕಡಿಮೆಯಾಗುತ್ತಿದೆ.ಏಕೆ?
11. ಗಂಗಾ ನದಿಯ ಬಯಲು ಪ್ರದೇಶದಲ್ಲಿ ಸಕ್ಕರೆ ಕೈಗಾರಿಕೆಯು ಹೆಚ್ಚು ಕೇಂದ್ರೀಕೃತವಾಗಿವೆ ಏಕೆ?
12. ಸ್ವಾತಂತ್ರ್ಯ ನಂತರದ ಭಾರತದ ಅಭಿವೃದ್ಧಿ ಚಟುವಟಿಕೆಗಳು ತೀವ್ರಗೊಂಡವು. ಹೇಗೆ?
13. ಇಂದು ಕೈಗಾರಿಕೆ ಮತ್ತು ಸೇವಾವಲಯಗಳು ಬಹಳ ವೇಗವಾಗಿ ವಿಸ್ತರಣೆಗೊಳ್ಳುವುದಕ್ಕೆ ಕಾರಣವೇನು?
14. ವಿಪ್ರೋ ಸಂಸ್ಥೆಯ ಅಧ್ಯಕ್ಷರು ಯಾರು?

ಇ.ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ಅಂಶಗಳಲ್ಲಿ ಉತ್ತರಿಸಿರಿ.2*15=30

1. ಬ್ರಿಟೀಷರಿಗೆ ಭಾರತದಲ್ಲಿ ಭದ್ರವಾಗಿ ನೆಲೆಯೂರಲು ದ್ವಿ ಸರ್ಕಾರ ಪದ್ಧತಿಯು ನೆರವಾಯಿತು. ಹೇಗೆ ಸಮರ್ಥಿಸಿರಿ.
2. ಶ್ರೀರಂಗ ಪಟ್ಟಣ ಒಪ್ಪಂದವು ಟಿಪ್ಪುವಿಗೆ ಏಕೆ ಅನಿವಾರ್ಯವಾಯಿತು?
3. ರಾಮಕೃಷ್ಣ ಮಿಶನ್ ನ್ನು ಯಾರು ಸ್ಥಾಪಿಸಿದರು?ಅದರ ಧ್ಯೇಯ ಉದ್ದೇಶಗಳು ಯಾವುವು?
4. ಚೀನಾ ಕ್ರಾಂತಿಯ ನಂತರ ಚೀನಾ ಹೇಗೆ ಅಭಿವೃದ್ಧಿ ಹೊಂದಿತು?
5. ಮಹಿಳೆಯರ ಸಬಲೀಕರಣಕ್ಕೆ ಕೈಗೊಂಡ ಕ್ರಮಗಳು ಯಾವುವು?
6. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟವನ್ನು ವಿವರಿಸಿ.
7. ಕೈಗಾ ಅಣು ವಿದ್ಯುತ್ ಸ್ಥಾವರ ಸ್ಥಾಪನೆಯನ್ನು ವಿರೋಧಿಸಲು ಕಾರಣವಾದ ಅಂಶಗಳು ಯಾವುವು?
8. ಪೂರ್ವ ಕರಾವಳಿ ಮತ್ತು ಪಶ್ಚಿಮ ಕರಾವಳಿಗೆ ಇರುವ ವ್ಯತ್ಯಾಸಗಳೇನು?
9. ಮಣ್ಣಿನ ಸವೆತವನ್ನು ತಡೆಗಟ್ಟಲು ಕ್ರಮಗಳನ್ನು ವಿವರಿಸಿರಿ.
10. ಅರಣ್ಯಗಳನ್ನು ಹೇಗೆ ಸಂರಕ್ಷಿಸಬಹುದು?
11. ಜಿ.ಪಿ.ಎಸ್ ವ್ಯವಸ್ಥೆ ಅತ್ಯುತ್ತಮ ಮಾರ್ಗ ಸೂಚಿಯಾಗಿದೆ.ಈ ಹೇಳಿಕೆಯನ್ನು ಸಮರ್ಥಿಸಿ.
12. ಕಡಲಕೊರೆತವನ್ನು ತಡೆಗಟ್ಟಬಹುದಾದ ಕ್ರಮಗಳನ್ನು ವಿವರಿಸಿ.
13. ಜನಸಂಖ್ಯಾ ಹೆಚ್ಚಳ ದೇಶದ ಅಭಿವೃದ್ಧಿಗೆ ಮಾರಕ. ಈ ಹೇಳಿಕೆಯನ್ನು ಸಮರ್ಥಿಸಿರಿ.
14. ಪಂಚವಾರ್ಷಿಕ ಯೋಜನೆಯ ಉದ್ದೇಶವೇನು?
15. ಜಾಗತೀಕರಣವು ವಿಶ್ವದಲ್ಲಿ ಆರ್ಥಿಕ ಚಲನೆಗೆ ಹೇಗೆ ಸಹಕಾರಿಯಾಗಿದೆ?

ಈ. ಕೆಳಗಿನ ಪ್ರಶ್ನೆಗಳಿಗೆ ಆರರಿಂದ ಎಂಟು ವಾಕ್ಯದಲ್ಲಿ ಉತ್ತರಿಸಿರಿ. 3*6=18

1.ಭಾರತೀಯ ಸೈನಿಕರಲ್ಲಿದ್ದ ಭಿನ್ನತೆಯೇ 1857ರ ದಂಗೆಯ ವಿಫಲತೆಗೆ ಕಾರಣವಾಯಿತು.ಸಮರ್ಥಿಸಿರಿ.

ಅಥವಾ

ಸಾರಿಗೆ ಸಂಪರ್ಕ ಪ್ರಗತಿ ಸ್ವಾತಂತ್ರ್ಯ ಚಳುವಳಿಯ ಮೂಲ. ವಿಶ್ಲೇಶಿಸಿ.

2.ಪ್ರಚಲಿತ ಜಗತ್ತಿಗೆ ನಿಶ್ಶಸ್ತ್ರೀಕರಣವು ಅತಿ ಅಗತ್ಯ ಎಂದು ಭಾರತ ಪ್ರತಿಪಾದಿಸಲು ಕಾರಣವೇನು?

ಅಥವಾ

ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾಗುವ ಅಂಶವೇನು?

3.ಅಸ್ಪೃಶ್ಯತಾ ನಿವಾರಣೆಗೆ ಭಾರತ ಸರ್ಕಾರ ಕೈಗೊಂಡಿರುವ ಕ್ರಮ ವಿವರಿಸಿ.

ಅಥವಾ

ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರಲ್ಲಿನ ವ್ಯತ್ಯಾಸ ತಿಳಿಸಿ.

4.ಭಾರತದಲ್ಲಿ ರಸ್ತೆಗಳ ಪ್ರಮುಖ್ಯತೆಯನ್ನು ತಿಳಿಸಿ.

ಅಥವಾ

ಜೈವಿಕ ತಂತ್ರಜ್ಞಾನದಿಂದ ಕೃಷೀ ಕ್ಷೇತ್ರದ ಮೇಲಾದ ಪರಿಣಾಮವೇನು?

5.ಗ್ರಾಮೀಣಾಭಿವೃಧ್ಧಿಯಲ್ಲಿ ಮಹಿಳೆಯ ಪಾತ್ರವೇನು?

ಅಥವಾ

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ಸಂಕ್ಷಿಪ್ತವಾಗಿ ವಿವರಿಸಿ.

6.ಬ್ಯಾಂಕಿನ ಕಾರ್ಯವನ್ನು ವಿವರಿಸಿರಿ.

ಅಥವಾ

ಜೀವ ವಿಮೆ ಅನುಕೂಲಕರವಾಗಿದೆ. ಏಕೆ?

ಉ. ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯದಲ್ಲಿ ಉತ್ತರಿಸಿರಿ.1*4=4

ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಶ್ಚಂದ್ರ ಬೋಸ್ರ ಪಾತ್ರವೇನು?

ಊ. ಭಾರತದ ನಕಾಶೆ ಬರೆದು ಕೆಳಗಿನ ಹೆಸರುಗಳನ್ನು ಗುರುತಿಸಿ. 1*4=4

A. 23 1/2* ಉತ್ತರ ಅಕ್ಷಾಂಶ
B. ರೊಯಿಲ್ಲ
C. ಪಂಪಸಾಗರ